## ಫ್ಯಾಕ್ಟ್ ಶೀಟ್

- ಒಂದು ಟನ್ ಪ್ಲಾಸ್ಟಿಕ್ ಚೀಲಗಳನ್ನು ಉತ್ಪಾದಿಸುವಾಗ 63 ಗಿಗಾಜೌಲ್ ಶಾಖ, 1340 ಟನ್ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆಯಾಗುತ್ತದೆ. ಆದರೆ ಒಂದು ಟನ್ ಸೆಣಬಿನ ಚೀಲಗಳನ್ನು ಉತ್ಪಾದಿಸುವಾಗ ಕೇವಲ ಎರಡು ಗಿಗಾಜೌಲ್‌ನಷ್ಟು ಶಾಖ ಬಿಡುಗಡೆಯಾಗುತ್ತದೆ ಮತ್ತು 150 ಕಿಲೋ ಗ್ರಾಂನಷ್ಟು ಇಂಗಾಲದ ಡಯಾಕ್ಸೈಡ್ ಬಿಡುಗಡೆಯಾಗುತ್ತದೆ.
- ನವೀಕರಿಸಬಹುದಾದ ಸಂಪನ್ಮೂಲಗಳ ಬಳಕೆಯಿಂದಾಗಿ ಕಾಗದ ತಯಾರಿಕೆಯಲ್ಲಿ ಸೆಣಬು ಬಹುಮುಖ್ಯ ಕಚ್ಚಾ ವಸ್ತುವಾಗಿ ಬಳಕೆಯಾಗುತ್ತದೆ.
- ಕೃತಕ ರಸಗೊಬ್ಬರಗಳ ಬಳಕೆಯ ಬದಲಿಗೆ ಸೆಣಬಿನ ಹಸಿರು ಗೊಬ್ಬರವನ್ನು ಬಳಸುವ ರೈತರು ಕಾರ್ಬನ್ ಕ್ರೆಡಿಟ್ ಗಳಿಸಬಹುದು.
- 'ಮದ್ರಾಸ್ ಐಐಟಿ'ಯ ಸಂಶೋಧಕರು ನೀರಿನ ಶುದ್ಧೀಕರಣ ಮಾಡಲು ತಾಮ್ರ ಲೇಪಿತ ಸೆಣಬಿನ ಮಣಿಗಳನ್ನು ಬಳಸುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಮುಚ್ಚಿದ ಪಾತ್ರೆ ಮತ್ತು ತೆರೆದ ಪಾತ್ರೆಗಳಲ್ಲಿರುವ ನೀರಿಗೆ ಸೂಕ್ಷ್ಮಾಣು ಜೀವಿಗಳು ಸೇರಿಕೊಳ್ಳುವುದನ್ನು ಈ ತಾಮ್ರಲೇಪಿತ ಸೆಣಬಿನ ಮಣಿಗಳು ತಡೆಯುತ್ತವೆ.
- ದ್ವಿದಳ ಜಾತಿಗೆ ಸೇರಿರುವ ಸೆಣಬು ಉತ್ತಮ ಹಸಿರೆಲೆ ಗೊಬ್ಬರವಾಗಿದ್ದು, ಹಿಪ್ಪು ನೇರಳೆ ಬೆಳೆಯ ಇಳುವರಿಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

ಸಾಕಷ್ಟು ಬೇಡಿಕೆಯ ನಂತರವೂ ಸೆಣಬಿನ ಬೇಸಾಯದ ಕಡೆಗೆ ರೈತರು ಹೆಚ್ಚಿನ ಒಲವು ತೋರಿಸುತ್ತಿಲ್ಲ. ಮಿಲ್ಲುಗಳು ನಾವೀನ್ಯತೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಸೆಣಬಿನ ಗಿರಣಿಗಳಲ್ಲಿರುವ ಯಂತ್ರೋಪಕರಣಗಳು ಪುರಾತನವಾಗಿದ್ದು, ಉತ್ಪಾದನೆ ನಿರೀಕ್ಷಿಸಿದ ಗುಣಮಟ್ಟ ತಲುಪುತ್ತಿಲ್ಲ. ರೆಟ್ಟಿಂಗ್ ವಿಧಾನಗಳನ್ನು ಉತ್ತಮಪಡಿಸುವ ಅನಿವಾರ್ಯತೆಯೂ ಇದೆ.

2006ರಲ್ಲಿ 'ಜೂಟ್ ಮಿಷನ್' ಘೋಷಿಸಿದ ಸರ್ಕಾರವು – ಸೆಣಬು ಬೆಳೆ ಸಂಶೋಧನೆ, ಕೃಷಿ ಅಭಿವೃದ್ಧಿ ಮತ್ತು ವಿಸ್ತರಣೆ, ಕಚ್ಚಾ ಸೆಣಬು ಸಂಸ್ಕರಣೆ ಮತ್ತು ಕಚ್ಚಾ ಸೆಣಬಿನ ವಾಣಿಜ್ಯೀಕರಣವನ್ನು ಆದ್ಯತೆಯನ್ನಾಗಿಕೊಂಡು ಕೆಲಸ ಮಾಡಲು ಅಪಾರ ಪ್ರಮಾಣದ ಬಂಡವಾಳವನ್ನು ಹೂಡಿತ್ತು. ಆದರೆ ಹಣ ಖರ್ಚಾಯಿತೇ ಹೊರತು ಯೋಜಿಸಿದಂತೆ ಯಾವ ಗುರಿಯನ್ನೂ ತಲುಪಲಾಗಲಿಲ್ಲ. ನೆರೆಯ ಬಾಂಗ್ಲಾದೇಶವು ಸೆಣಬಿನ ಬೆಳೆ ಮತ್ತು ಉತ್ಪನ್ನಗಳ ಆಧುನಿಕರಣಕ್ಕಾಗಿ ರಾಷ್ಟ್ರಮಟ್ಟದ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ ನುರಿತ ತಜ್ಞರಿಂದ ನಿರಂತರ ಕೆಲಸ ಮಾಡಿಸುತ್ತಿದೆ.

### ಉದ್ಯಮದ ಮೊದಲ ಬೀಜ

ದೇಶದಲ್ಲಿ ಸೆಣಬಿನ ಉದ್ಯಮ ಕೈಮಗ್ಗದ ರೂಪದಲ್ಲಿ ದೊಡ್ಡ ಉದ್ಯಮವೆಂಬಂತೆ ಪ್ರಾರಂಭವಾದುದು ಕಲ್ಕತ್ತಾನಗರ ಪಕ್ಕದ ರಿಶ್ರ ಎಂಬ ಹಳ್ಳಿಯಲ್ಲಿ ಶುರುವಾಯಿತು. ಯಂತ್ರಚಾಲಿತ ಸೆಣಬಿನ ಉದ್ಯಮ ಪ್ರಾರಂಭವಾದದ್ದು 1855ರಲ್ಲಿ. ನಂತರ ಪವರ್ ಲೂಮ್‌ಗಳು (ವಿದ್ಯುತ್ ಚಾಲಿತ ಮಗ್ಗ) ಬಂದವು. ಉತ್ಪಾದನೆ ದ್ವಿಗುಣಗೊಳ್ಳಲು ಶುರುವಾಯಿತು. ಆಗ ರಫ್ತು ಪ್ರಾರಂಭಗೊಂಡಿತು.

1947ರಲ್ಲಿ ದೇಶ ವಿಭಜನೆಯಿಂದಾಗಿ 'ಈಸ್ಟ್ ಪಾಕಿಸ್ತಾನ್' (ಈಗಿನ ಬಾಂಗ್ಲಾದೇಶ ) ಅಸ್ತಿತ್ವಕ್ಕೆ ಬಂದಾಗ ಸೆಣಬಿನ ಉದ್ಯಮಕ್ಕೆ ಭಾರೀ ದೊಡ್ಡ ಆಘಾತವಾಯಿತು. ಸೆಣಬಿನ ಬೆಳೆ ಬೆಳೆಯುವ ಪ್ರದೇಶದ ಶೇ. 80 ಭಾಗ ಬಾಂಗ್ಲಾದೇಶದಲ್ಲಿತ್ತು. ಅದರ ಉತ್ಪನ್ನ ತಯಾರಿಸುವ ಬಹುಪಾಲು ಮಿಲ್‌ಗಳು ನಮ್ಮಲ್ಲಿದ್ದವು. ರಾಜಕೀಯ ಭಿನ್ನಾಭಿಪ್ರಾಯಗಳು ತಲೆದೋರಿ ಎರಡೂ ದೇಶಗಳ ನಡುವೆ ಬಾಂಗ್ಲಾದೇಶದಿಂದ ಕಚ್ಚಾ ಸೆಣಬು ನಮಗೆ ಬರುವುದು ನಿಂತು ಹೋಯಿತು. ಸೆಣಬಿನ ಉದ್ಯಮವನ್ನು ವಿಸ್ತರಿಸಲೇಬೇಕು ಎಂಬ ಧ್ಯೇಯ ಈ ಸಮಸ್ಯೆಯಿಂದ ಹೊರ ಬರಲು ದಾರಿ ತೋರಿತು.



ಸೆಣಬಿನ ಉದ್ಯಮದ ತಾಕತ್ತು ಇರುವುದೇ ರಫ್ತಿನಲ್ಲಿ. ಅದಕ್ಕೆ ತಕ್ಕ ತಯಾರಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಉತ್ತಮ ಗುಣಮಟ್ಟದ ಉತ್ಪನ್ನ ತಯಾರಿಸುವ ಕ್ಷಮತೆ ಇರಬೇಕು. ಸಾಂಪ್ರದಾಯಿಕ ಬಳಕೆಯ ವರ್ತುಲದಿಂದಾಚೆಗೆ ಸೆಣಬು ತಲುಪಬೇಕಿದೆ. ಉದ್ಯಮದಲ್ಲಿರುವ ಕೆಲಸಗಾರರಿಗೆ ಕೌಶಲ್ಯ ವೃದ್ಧಿಸಬೇಕಿದೆ. ಹೊಸ ತಂತ್ರಜ್ಞಾನ ಬಳಕೆ ಮತ್ತು ಕಸುಬುದಾರಿಕೆ ಸಂಪಾದಿಸಲು ತರಬೇತಿಯ ಅಗತ್ಯವಿದೆ. ಸೆಣಬಿನ ತ್ಯಾಜ್ಯ ನಿರ್ವಹಣೆಯು ಸುಸ್ಥಿರ ಉದ್ಯಮ ಅಭಿವೃದ್ಧಿಯ ನೀತಿಯ ಪರಿಮಿತಿಯಲ್ಲಿರಬೇಕು. ಸೆಣಬು (ಜ್ಯೂಟ್) ಉತ್ಪನ್ನದಲ್ಲಿ ಭಾರತ ವಿಶ್ವದಲ್ಲಿ ಮೊದಲ ಸ್ಥಾನದಲ್ಲಿದ್ದರೂ, ಬಾಂಗ್ಲಾದೇಶದೊಂದಿಗೆ ವ್ಯಾಪಾರದಲ್ಲಿ ಪೈಪೋಟಿ ನೀಡಲಾಗುತ್ತಿಲ್ಲ. ಎಲ್ಲಿ ತಪ್ಪಾಗಿದೆ ಎಂದು ತಿಳಿದಿದೆ. ಸರಿ ಮಾಡಬೇಕಾದವರು ಸುಮ್ಮನಿದ್ದಾರೆ. ಇವರನ್ನು ಕೇಳುವವರಾರು?

ಪರಿಸರವನ್ನು ದೊಡ್ಡಮಟ್ಟದಲ್ಲಿ ಕಲುಷಿತಗೊಳಿಸುತ್ತಿರುವ ಪ್ಲಾಸ್ಟಿಕ್ ಜಾಗದಲ್ಲಿ ಸೆಣಬಿನಿಂದ ತಯಾರಾದ ಉತ್ಪನ್ನಗಳ ಅವಶ್ಯಕತೆ ಇಂದು ಎಲ್ಲರಿಗೂ ಇದೆ. ವಾಯುಗುಣ ಬದಲಾವಣೆಯ ನಿಯಂತ್ರಣಕ್ಕಾಗಿ ಸೆಣಸುತ್ತಿರುವ ವಿಶ್ವದ ಎಲ್ಲ ದೇಶಗಳು ಇದರ ಕಡೆ ಗಮನಹರಿಸಬೇಕಿದೆ. ಅತಿ ಹೆಚ್ಚು ಸೆಣಬಿನ ಉತ್ಪನ್ನಗಳ ತವರು ಎನಿಸಿರುವ ನಾವು ಮತ್ತು ಬಾಂಗ್ಲಾದೇಶಗಳು ವಿಶ್ವದ ಇತರರಿಗೆ ಮಾದರಿಯಾಗಬೇಕಿದೆ. ಅದಕ್ಕೂ ಮುನ್ನ ನಮ್ಮಲ್ಲಿ ಸೆಣಬಿನ ಉತ್ಪನ್ನಗಳ ಬಳಕೆ ಹೆಚ್ಚಬೇಕು. ಸರ್ಕಾರಗಳು ಪ್ಲಾಸ್ಟಿಕ್ ಉತ್ಪಾದನೆಗೆ ಕಡಿವಾಣ ಹಾಕಿ ಸೆಣಬಿನ ಉತ್ಪನ್ನಗಳಿಗೆ ಹೆಚ್ಚಿನ ಸಬ್ಸಿಡಿ ನೀಡಿ ಅದರ ಬಳಕೆಯನ್ನು ಪ್ರೋತ್ಸಾಹಿಸಬೇಕು. ಸೆಣಬಿನ ಪರಿಸರಸ್ನೇಹಿ ಗುಣಗಳ ಬಗ್ಗೆ ಪಠ್ಯಪುಸ್ತಕಗಳಲ್ಲಿ ಕಡ್ಡಾಯವಾಗಿ ಪಾಠಗಳಿರುವಂತೆ ನೋಡಿಕೊಳ್ಳಬೇಕು. ತಿಳಿವಳಿಕೆ ಇರುವ ಜನ ಸೆಣಬಿನ ಪದಾರ್ಥಗಳನ್ನು ಹೆಚ್ಚು ಹೆಚ್ಚು ಬಳಸಿ ಇತರರಿಗೂ ಅವುಗಳನ್ನು ಬಳಸುವಂತೆ ಪ್ರೇರಣೆ ನೀಡುವಲ್ಲಿ ಮಾದರಿಯಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in